ಕಾರ್ಕಳ ಜ್ಞಾನಸುಧಾ
ಪದವಿಪೂರ್ವ ಕಾಲೇಜು
College Code : SU 278
ಗಣಿತ್ ನಗರ, ಕುಕ್ಕುಂದೂರು, ಕಾರ್ಕಳ
ಅಜೆಕಾರ್ ಪದ್ಮಗೋಪಾಲ್
ಎಜುಕೇಶನ್ ಟ್ರಸ್ಟ್‌ನ ಆಡಳಿತಕ್ಕೊಳಪಟ್ಟಿದೆ.
ಸಂಚಿಕೆ – 24

KNOWLEDGE RESEARCH VALUES

# ಜ್ಞಾನಸುಧಾ ಪತ್ರಿಕೆ

ಸಂತೃಪ್ತ ಸಮಾಜ ನಿರ್ಮಾಣದ ಕನಸುಗಳೊಂದಿಗೆ ........

For internal Circulation only

ಪುಟ 1: OUR 'TOP NOTCH' Performance of Academic year 2018 -19
ಪುಟ 1: JNANASUDHA is ready to Launch "JNANSUDHA ONLINE NEET TEST SERIES"
ಪುಟ 1: ನಿಯತಿ. ಕೆ. ಶೆಟ್ಟಿ : ರಾಷ್ಟ್ರಮಟ್ಟದ ಬ್ಯಾಡ್ಮಿಂಟನ್‌ನಲ್ಲಿ ಚಿನ್ನ ಗೆದ್ದ ಜ್ಞಾನಸುಧಾದ ಪ್ರಥಮ ಕ್ರೀಡಾ ಪ್ರತಿಭೆ APGETಯಿಂದ ಒಂದು ಲಕ್ಷ ನಗದು ಪುರಸ್ಕಾರ
ಪುಟ 1: ಶ್ರೀ ಮಿಥುನ್ ಯು. ಅವರಿಗೆ ಡಾಕ್ಟರೇಟ್
ಪುಟ 1: ಜೆ.ಇ.ಇ ಮೈನ್ಸ್ : ಕಾರ್ಕಳ ಜ್ಞಾನಸುಧಾದ 31 ವಿದ್ಯಾರ್ಥಿಗಳಿಗೆ ಶೇ.90 ಕ್ಕಿಂತ ಅಧಿಕ ಪರ್ಸಂಟೈಲ್
ಪುಟ 2: STATE LEVEL SPORTS ACHIVERS 2018-19
ಪುಟ 3: ಕ್ರೀಡಾಲೋಕ
ಪುಟ 3: ಜ್ಞಾನಸುಧಾದಲ್ಲಿ ವಾರ್ಷಿಕ ಕ್ರೀಡಾಕೂಟ 2018–19
ಪುಟ 4: ಜ್ಞಾನಸಂಭ್ರಮದಲ್ಲಿ ಪ್ರೊ.ಎಂ. ಬಾಲಕೃಷ್ಣ ಶೆಟ್ಟಿ ಯವರ ಅಮೃತವಾಣಿ
ಪುಟ 4: ಜ್ಞಾನಸುಧಾದಲ್ಲಿ ಮೈಸೂರು ವಿಭಾಗೀಯ ಮಟ್ಟದ ಯೋಗಾಸನ ಸ್ಪರ್ಧೆ
ಪುಟ 5: ಜ್ಞಾನಸುಧಾದ ಕ್ರೀಡಾ ಪ್ರತಿಭೆಗಳು
ಪುಟ 5: ಜ್ಞಾನ ಗೋಪಾಲ್ ಹಾಗೂ ಜ್ಞಾನ ಪದ್ಮ ವಿದ್ಯಾರ್ಥಿ ನಿಲಯೋತ್ಸವ
ಪುಟ 5: The Socio-Sensitive 'us' !
ಪುಟ 5: ವಿದೇಶಿ ವ್ಯಾಮೋಹದಲ್ಲಿ ಸ್ವದೇಶ ಮರೆಯುವವರ ನಡುವೆ ಇವರೊಂದು ಅಪವಾದ.......
ಪುಟ 6: DISTINCTION STUDENTS IN FIRST PUC ANNUAL EXAM 2018.19 (PCMB / PCMC / PCMS)
ಪುಟ 9: ಜ್ಞಾನಸುಧಾ : ಗಾಂಧೀ–ಶಾಸ್ತ್ರಿ ಜಯಂತಿ, ಸ್ವಚ್ಛ ಭಾರತ–ಅಭಿಯಾನ
ಪುಟ 9: ಜ್ಞಾನಸುಧಾ: ತಾಲೂಕು ಕೇಂದ್ರದಲ್ಲಿ ಸ್ವಚ್ಛತಾ ಅಭಿಯಾನ
ಪುಟ 9: ಜ್ಞಾನಸುಧಾ: ಎನ್.ಎಸ್.ಎಸ್. ವಾರ್ಷಿಕ ಚಟುವಟಿಕೆಗಳ ಉದ್ಘಾಟನೆ
ಪುಟ 10: Right choice in life, makes all the difference
ಪುಟ 10: Life and World
ಪುಟ 10: ಜ್ಞಾನಜ್ಯೋತಿ – ಕವನ

## OUR 'TOP NOTCH' Performance of Academic year 2018 -19

1) S.S.L.C.& II P.U.C.Board Exam Result 100%
2) Sanketh .G.B. got 18th Rank in KCET.(Engg) & Entered I.I.T. through J.E.advanced (General Marit)
3) No.of Students who entered M.B.B.S. through NEET. -- 28
4) No. of Students who scored KCET ( Engg) Rank below 650---11 & below 5000-- 55

## JNANASUDHA is ready to Launch "JNANSUDHA ONLINE NEET TEST SERIES"

Jnanasudha team which has successfully placed 92 of its MBBS aspirants in the prestigious Medical colleges including Bangalore Medical college, is getting ready to launch its dream project " JNANASUDHA ONLINE NEET TEST SERIES ". This opportunity could be availed by any MBBS aspirant through online, with some terms and conditions.

This programme will be inaugurated on 20 March 2019. Dr.S.M.Hegde,professor and former dean Students Welfare, NITK Surthkal will be the inaugurator. Dr. Avinash Shetty, Medical Superintendent and professor of community Medicine K.M.C .MAHE Manipal will preside over the programme. Mr.PadmaPrasada, Executive Director , Mr .Rahul Pandey , Managing Director of TechVerve Solutions Pvt. Ltd , will be the guests of Honour.
A newly constructed water fountain in the premises will be inaugurated on this occasion

## ನಿಯತಿ. ಕೆ. ಶೆಟ್ಟಿ : ರಾಷ್ಟ್ರಮಟ್ಟದ ಬ್ಯಾಡ್ಮಿಂಟನ್‌ನಲ್ಲಿ ಚಿನ್ನ ಗೆದ್ದ ಜ್ಞಾನಸುಧಾದ ಪ್ರಥಮ ಕ್ರೀಡಾ ಪ್ರತಿಭೆ APGETಯಿಂದ ಒಂದು ಲಕ್ಷ ನಗದು ಪುರಸ್ಕಾರ






ಅಜೆಕಾರ್ ಪದ್ಮ ಗೋಪಾಲ್ ಎಜುಕೇಶನ್ ಟ್ರಸ್ಟ್‌ನ ಟ್ರಸ್ಟಿಯವರಾದ, ಶ್ರೀ ಕರುಣಾಕರ ಶೆಟ್ಟಿ ಹಾಗೂ ಶ್ರೀಮತಿ ನಿರ್ಮಲಾ ಶೆಟ್ಟಿ ದಂಪತಿಗಳ ಪುತ್ರಿಯಾದ ನಿಯತಿ .ಕೆ .ಶೆಟ್ಟಿ ಇವರು, ಓದಿನ ಜೊತೆಗೆ ಕ್ರೀಡೆಯಲ್ಲೂ ಸಮಾನ ಆಸಕ್ತಿ ಇರಿಸಿಕೊಂಡವರು
ಪದವಿ ಪೂರ್ವ ಶಿಕ್ಷಣ ಇಲಾಖೆಯ ವತಿಯಿಂದ ಭುವನೇಂದ್ರ ಕಾಲೇಜು ಕಾರ್ಕಳದಲ್ಲಿ ನಡೆಸಲಾದ ಜಿಲ್ಲಾಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಜ್ಞಾನಸುಧಾ ತಂಡವನ್ನು ಪ್ರತಿನಿಧಿಸಿ, ಪ್ರಥಮ ಸ್ಥಾನ ಪಡೆದು, ರಾಜ್ಯ ಮಟ್ಟಕ್ಕೆ ಆಯ್ಕೆಯಾದರು. ಚಿಕ್ಕಮಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಪಂದ್ಯಾಟದಲ್ಲಿ ಉಡುಪಿ ತಂಡವನ್ನು ಪ್ರತಿನಿಧಿಸಿ, ರಾಷ್ಟಮಟ್ಟಕ್ಕೆ ಆಯ್ಕೆಯಾದರು. ಮಹಾರಾಷ್ಟ್ರ ದ ಔರಂಗಾಬಾದ್ ನಲ್ಲಿ ಡಿ. 29 ರಿಂದ ಜ.2 ರ ವರೆಗೆ ನಡೆದ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕವನ್ನು ಪಡೆದರು
ಇವರ ಸಾಧನೆಯನ್ನು ಹಲವು ಸಂಘ ಸಂಸ್ಥೆಗಳು ಗುರುತಿಸಿವೆ. ಅಜೆಕಾರ್ ಪದ್ಮಗೋಪಾಲ್ ಎಜುಕೇಷನ್ ಟ್ರಸ್ಟ್ ಏರ್ಪಡಿಸಿದ ಕಾರ್ಯಕ್ರಮದಲ್ಲಿ, ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ, ಎಲ್.ಐ.ಸಿ ಕಾರ್ಕಳದ ಉದ್ಯೋಗಿ, ಅಂತರಾಷ್ಟ್ರೀಯ ಕ್ರೀಡಾಪಟು, ಜಾಯ್ಲಿನ್ ಲೋಬೋ,ಜಾನ್ಸ್ ಅಕಾಡೆಮಿಯ ಮುಖ್ಯಸ್ಥ ರಾದ ಶ್ರೀ ಜಾನ್ ಡಿಸಿಲ್ವ ಮತ್ತಿತರರು ಇವರನ್ನು ಸನ್ಮಾನಿಸಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಗಣರಾಜ್ಯೋತ್ಸವದ ದಿನದಂದು ಇವರನ್ನು ಸನ್ಮಾನಿಸಿತು. ಇವರ ಸಾಧನೆಗೆ ಕಾರಣಕರ್ತರಾದ, ತರಬೇತುದಾರ ಸುಬಾಷ್ ಜೈನ್ ಅವರಿಗೆ ಜ್ಞಾನಸುಧಾ ಪರಿವಾರ ಅಭಾರಿಯಾಗಿದೆ


ಡಾ. ಮಿಥುನ್

## ಶ್ರೀ ಮಿಥುನ್ ಯು. ಅವರಿಗೆ ಡಾಕ್ಟರೇಟ್

ಕಾರ್ಕಳ ಜ್ಞಾನಸುಧಾದ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮಿಥುನ್ ಯು. ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯವು ಅವರ **"Studies on some poly electrolyte complexes derived from modified poly saccharides"** ಎನ್ನುವ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಶ್ರೀಯುತರು ಮಂಗಳೂರು ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪ್ರೊ.ವಿಶಾಲಕ್ಷಿ ಬಿ. ಇವರಿಂದ ಮಾರ್ಗದರ್ಶನ ಪಡೆದಿದ್ದರು.

## ಜೆ.ಇ.ಇ ಮೈನ್ಸ್ : ಕಾರ್ಕಳ ಜ್ಞಾನಸುಧಾದ 31ವಿದ್ಯಾರ್ಥಿಗಳಿಗೆ ಶೇ.90 ಕ್ಕಿಂತ ಅಧಿಕ ಪರ್ಸಂಟೈಲ್

ಕಾರ್ಕಳ ಜ್ಞಾನಸುಧಾದ 10 ವಿದ್ಯಾರ್ಥಿಗಳಿಗೆ 2018ನೇ ಸಾಲಿನ ರಾಷ್ಟ್ರಮಟ್ಟದ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಯಲ್ಲಿ 95 ಕ್ಕಿಂತ ಅಧಿಕ ಪರ್ಸಂಟೈಲ್ ದೊರಕಿರುತ್ತದೆ.


GOUTHAM K. ADIGA
99.29%


GAGAN S SHETTY
97.93%


SUMUKH R BHAT
97.53%


SWAROOP R SHETTY
97.46%


SATHWIK J JOHN
97.46%


SHRINIDHI RAJESH
96.13%


GURUGANESH MADDODI
95.18%


K ABHEESHTA KUMAR JAIN
95.71%


SHAMANTH K M
95.22%


SUMUKHA
95.22%


**TEJAS HEGDE**
94.52%


**SHREYAS BASRI**
94.84%


**VEDANTH SHETTY**
94.84%


**SAMEEKSHA K S**
94.52%


**H N SANJAY KUMAR**
94.39%


**NAVEEN M PATIL**
94.02%


**SMITHA S M**
93.92%


**JEEVAN T A**
93.70%


**SHARATH N E**
93.13%


**SATHWIK S Y**
93.03%


**NANDAKISHOR SHRIDHAR HEGDE**- 92.94%


**SHARAT S. HEGDE**
92.38%


**MANJUNATH GOWDA S**
92.32%


**ANMOL GADAG**
92.06%


**KAUSTUBH U UPADHYAYA**
92.05%


**SAMUKH K A**
91.93%


**SUHAS A R**
91.75%


**JAYAVARDAN S S**
91.30%


**PAVAN PATIL**
90.96%


**PREETAM GANESH HEGDE**
90.54%


**PRATHEEK P**
90.10%

---

# STATE LEVEL SPORTS ACHIVERS 2018-19


**SUMUKH B**
17pcmb1
CHESS -YADGIRI






**RANJITHA R SHETTY**
17pcmb2
BASKETBALL-KOLAR


**ASHRITH M S**
17pcmb4
BASKETBALL-KOLAR


**PRAGATHI ACHARYA**
17pcmc
BASKETBALL-KOLAR


**SANNIDHI S**
17pcms
BASKETBALL-KOLAR


**VISHWAS S NAYAK**
17pcms
BADMINTON-CHICKMANGALUR


**P S ANISHA**
18pcmb2
BASKETBALL-KOLAR


**BHAVANA REDDY K**
18pcmb3
BASKETBALL-KOLAR


**VINUTHANA DEVARADDI**
18pcmb5
BASKETBALL-KOLAR


**SATHVIK ACHARYA**
18pcmc
FOOTBALL-MANDYA


**TREENAL PRITHISHA PINTO**
18pcmc
BADMINTON-CHIKMAGALUR


**ANANYA B**
18pcmc
CHESS TOURNAMENT-YADGIRI


**SHRIRAKSHA S SHETTY**
18ebas
THROWBALL-BALLARI
BASKETBALL - KOLAR


**ANJAN M**
17pcmc
LONG JUMP-MYSORE


**SWASTHI N SHETTY**
18pcmb1
SHOTPUT - MYSORE


**SOWRABHA S**
18 PCMB4
BASKET BALL-KOLAR

---

## ಜ್ಞಾನಸುಧಾ : ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ



ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವು ದಿನಾಂಕ 10.11.2018 ರಿಂದ 16.11.2018ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಲ್ಲೂರು ಕಾರ್ಕಳ ತಾಲೂಕು ಇಲ್ಲಿ ನಡೆಯಿತು.

ಶಿಬಿರವನ್ನು ಉದ್ಘಾಟಿಸಿದ ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿ. ಸುನಿಲ್ ಕುಮಾರ್ ಮಾತನಾಡಿ 'ಯುವ ಜನತೆ ಸಮಾಜಸೇವೆಯಲ್ಲಿ ತೊಡಗುವುದರೊಂದಿಗೆ ಇತರರಿಗೆ ಮಾದರಿಯಾಗಬೇಕು, ಎನ್ನೆಸ್ಸೆಸ್ ವಿದ್ಯಾರ್ಥಿಗಳಿಗೆ ಶಿಬಿರದಲ್ಲಿ ಸಿಗುವ ಶಿಕ್ಷಣ ಸಮಾಜಮುಖಿ ಕಾರ್ಯಗಳಿಗೆ ಪ್ರೇರೇಪಣೆಯಾಗಬೇಕು' ಎಂದರು. ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ ನ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಅನಿಲ್ ಕುಮಾರ್ ಜೈನ್ ದಿಕ್ಸೂಚಿ ಭಾಷಣದಲ್ಲಿ ಎನ್ನೆಸ್ಸೆಸ್ ಧ್ಯೇಯೋದ್ದೇಶಗಳ ಬಗೆಗೆ ಮಾತನಾಡಿ ಸಮಯ ಪಾಲನೆ ಮತ್ತು ಸಮಯ ಪ್ರಜ್ಞೆ ಎಂಬ ವಿಷಯಗಳು ಜೀವನದ ದಿಕ್ಕನ್ನೇ ಬದಲಾಯಿಸಬಲ್ಲವು ಎಂಬ ಸಂದೇಶ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ ನ ಆಡಳಿತ ಮಂಡಳಿಯ ಸದಸ್ಯರಾದ ಡಾ. ಪ್ರಕಾಶ್ ಶೆಣೈ ಮಾತನಾಡಿ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆಗಾಗಿ ವಿದ್ಯಾರ್ಥಿಗಳು ಯಾಕೆ ಮತ್ತು ಹೇಗೆ ತಯಾರಾಗಬೇಕೆಂದು ವಿವರಿಸಿದರು.

ಶಿಬಿರದುದ್ದಕ್ಕೂ ಶೈಕ್ಷಣಿಕ, ಸಾಂಸ್ಕೃತಿಕ, ಬೌದ್ಧಿಕ ಕಾರ್ಯಕ್ರಮಗಳ ಜೊತೆಗೆ ಹಲವು ಶ್ರಮದಾನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಶಾಲೆಯ ಕೈತೋಟಕ್ಕೆ ಪೈಪ್‌ಲೈನ್ ತೋಡಿಸಿದ್ದು ಮಹತ್ವದ ಶ್ರಮದಾನವಾಯಿತು. ಶಿಬಿರದುಕ್ಕೂ ಸಾರ್ವಜನಿಕರ ಸಹಕಾರ ಉತ್ತಮ ರೀತಿಯಲ್ಲಿ ದೊರಕಿತು. ಶಿಬಿರದ ಅಂತಿಮ ರಾತ್ರಿ ಶಿಬಿರಜ್ಯೋತಿ ನಡೆಯಿತು. ಈ ಕಾರ್ಯಕ್ರಮಕ್ಕೆ ಡಾ. ಸುಧಾಕರ ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿದರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅಜೆಕಾರ್ ಪದ್ಮ ಗೋಪಾಲ್ ಎಜುಕೇಶನ್ ಟ್ರಸ್ಟ್‌ನ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಗಣಪತಿ ಪೈ ಅವರು 'ಸಂಘ ಜೀವನದ ಪಾಠ ಕಲಿಸುವ, ಸೇವಾ ಮನೋಭಾವನೆಯ ಅರಿವು ಮೂಡಿಸುವ ಕಾರ್ಯವನ್ನು ಎನ್ನೆಸ್ಸೆಸ್ ಮಾಡುತ್ತಿದೆ' ಎಂದರು. ಶಿಬಿರದಲ್ಲಿ ನಡೆದ ವಿವಿಧ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಆಟೋಟ ಸ್ಪರ್ದೆಗಳಲ್ಲಿ ವಿಜೇತರಾದ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಾದ ವಿಘ್ನೇಷ್ ಶೆಟ್ಟಿ ಮತ್ತು ನಿಸರ್ಗ ಕ್ರಮವಾಗಿ ಉತ್ತಮ ಸ್ವಯಂ ಸೇವಕ-ಸೇವಕಿ ಪ್ರಶಸ್ತಿ ಪಡೆದರು. ಅಜೆಕಾರ್ ಪದ್ಮ ಗೋಪಾಲ್ ಎಜುಕೇಶನ್ ಟ್ರಸ್ಟ್‌ನ ಟ್ರಸ್ಟಿ ಶ್ರೀ ಕರುಣಾಕರ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜ್ಞಾನಸುಧಾ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಡಾ. ಸುಧಾಕರ ಶೆಟ್ಟಿ, ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀಮತಿ ಜ್ಯೋತಿ ಪದ್ಮನಾಭ ಬಂಡಿ, ಕಾಲೇಜಿನ ಉಪ ಪ್ರಾಂಶುಪಾಲರಾದ ಶ್ರೀ ಸಾಹಿತ್ಯ, ಊರ ಮಹನೀಯರು ಉಪಸ್ಥಿತರಿದ್ದರು.

ಕ್ರೀಡಾಲೋಕ

## ಜಿಲ್ಲಾ ಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾಟ





2018–19ನೇ ಸಾಲಿನ ಜಿಲ್ಲಾ ಮಟ್ಟದ ಬಾಸ್ಕೆಟ್‌ಬಾಲ್ ಪಂದ್ಯಾಟದ ಉದ್ಘಾಟನೆಯ ಹಿರಿಮೆಯ ಗರಿ ಜ್ಞಾನಸುಧಾಕ್ಕೆ ತಂದಿದೆ. ಶಿಸ್ತಿನಿಂದ ಬಹಳ ಅಚ್ಚುಕಟ್ಟಾಗಿ, ಪ್ರಶಂಸನೀಯವಾಗಿ ಬಾಸ್ಕೆಟ್‌ಬಾಲ್ ಪಂದ್ಯಾಟವನ್ನು ಯಶಸ್ಸುಗೊಳಿಸಿದ ಕೀರ್ತಿ ನಮ್ಮ ಸಂಸ್ಥೆಯದ್ದಾಗಿದೆ. ಉಡುಪಿ ಜಿಲ್ಲಾ ಮಟ್ಟದ ಪದವಿ ಪೂರ್ವಕಾಲೇಜು ವಿಭಾಗದ ಬಾಲಕ ಬಾಲಕಿಯರ ಬಾಸ್ಕೆಟ್ ಬಾಲ್ ಪಂದ್ಯಾಟವು ನಮ್ಮ ಸಂಸ್ಥೆಯ ಸುಂದರವಾದ, ಸುಸಜ್ಜಿತ ಬಾಸ್ಕೆಟ್ ಬಾಲ್ ಅಂಕಣದಲ್ಲಿ ದಿನಾಂಕ 8 ಸಪ್ಟಂಬರ್ 2018ರಂದು ನಡೆಯಿತು. ಪ್ರತಿಷ್ಠಿತ ನಿಟ್ಟೆ ವಿದ್ಯಾಸಂಸ್ಥೆಯ ಪ್ರಾಧ್ಯಾಪಕ ಡಾ.ಕೆ.ಶ್ರೀನಾಥ್ ಶೆಟ್ಟಿ ಅವರು ಪಂದ್ಯಾಟವನ್ನು ಉದ್ಘಾಟಿಸಿ ಕ್ರೀಡಾ ಸ್ಫೂರ್ತಿಯಿಂದ ಕ್ರೀಡೆಯಲ್ಲಿ ಭಾಗವಹಿಸಿದರೆ ಅತ್ಯುನ್ನತ ಯಶಸ್ಸು ಪಡೆಯಲು ಸಾಧ್ಯವೆಂದು ಕ್ರೀಡಾ ಪಟುಗಳಿಗೆ ಹಾಗೂ ಕ್ರೀಡಾಭಿಮಾನಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ನಮ್ಮೆಲ್ಲರ ಮಾರ್ಗದರ್ಶಕರಾದ ಡಾ.ಸುಧಾಕರ ಶೆಟ್ಟಿಯವರು ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡು, ಭಾಗವಹಿಸಿದ ಜಿಲ್ಲೆಯ ವಿವಿಧ ಕಾಲೇಜಿನ ಬಾಸ್ಕೆಟ್ ಬಾಲ್ ತಂಡಗಳನ್ನುಅಭಿನಂದಿಸಿದರು. ಸದಾ ಕ್ರೀಡಾ ಸ್ಫೂರ್ತಿಯನ್ನು ತುಂಬುವ ಟ್ರಸ್ಟಿಗಳಾದ ಶ್ರೀ ಕರುಣಾಕರ ಶೆಟ್ಟಿ, ಜಿಲ್ಲಾ ದೈಹಿಕ ಶಿಕ್ಷಣ ಸಂಘದ ಅಧ್ಯಕ್ಷರಾದ ಶ್ರೀ ದಿನೇಶ್ ಕಾರ್ಕಳ, ದೈಹಿಕ ಶಿಕ್ಷಣ ಸಂಯೋಜಕರಾದ ರವೀಂದ್ರ ಶೆಟ್ಟಿ ಉಪಸ್ಥಿತರಿದ್ದರು. ಕಾಲೇಜಿನ ಉಪಪ್ರಾಂಶುಪಾಲ ಶ್ರೀ ಸಾಹಿತ್ಯ, ಸ್ವಾಗತಿಸಿ ದೈಹಿಕ ಶಿಕ್ಷಣ ನಿರ್ದೇಶಕಿ ಸೌಜನ್ಯ ಹೆಗ್ಡೆ ವಂದಿಸಿದರು. ಪ್ರಜ್ವಲ್ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು. ಮತ್ತೊಂದು ಹೆಮ್ಮೆಯ ವಿಚಾರವೆಂದರೆ ನಮ್ಮದೇ ಕಾಲೇಜಿನ ಬಾಸ್ಕೆಟ್ ಬಾಲ್ ಬಾಲಕಿಯರ ತಂಡ ತನ್ನ ಉತ್ತಮ ಆಟದೊಂದಿಗೆ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗುವ ಮೂಲಕ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ದ್ವಿತೀಯ ಸ್ಥಾನವನ್ನು ಪೂರ್ಣಪ್ರಜ್ಞ ಪದವಿ ಪೂರ್ವಕಾಲೇಜು ಅದಮಾರು ಇವರು ಪಡೆದುಕೊಂಡಿರುತ್ತಾರೆ. ಬಾಲಕರ ವಿಭಾಗದಲ್ಲಿ ಪೂರ್ಣಪ್ರಜ್ಞ ಪದವಿ ಪೂರ್ವಕಾಲೇಜು ಉಡುಪಿ ಪ್ರಥಮ ಸ್ಥಾನ, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು ಉಡುಪಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಸಂಸ್ಥೆಯ ಬೋಧಕ ಬೋಧಕೇತರ ಸಿಬ್ಬಂಧಿ ವರ್ಗದವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ವಾಲಿಬಾಲ್ ಜಿಲ್ಲಾಮಟ್ಟದಲ್ಲಿ ಭಾಗವಹಿಸಿದ ಬಾಲಕರ ತಂಡ



1.ಸುಹಿತ್ ಶೆಟ್ಟಿ (17ಪಿಸಿಎಂಸಿ) ತಂಡದ ನಾಯಕ 2. ಲಿಂಯೋನಾಲ್ಡ್ (18ಪಿಸಿಎಂಸಿ) 3.ಧನುಷ್ ಭಟ್ (17ಪಿಸಿಎಂಎಸ್) 4. ನಿತಿನ್ ಪಟಗಾರ್ (18ಪಿಸಿಎಂಬಿ) 5.ಪ್ರಥಮ ನಾಯಕ್ ( 18 ಪಿಸಿಎಂಬಿ) 6.ಶ್ರೀನಿಧಿ (17ಪಿಸಿಎಂಬಿ) 7.ಮಧುಸೂದನ್ ಸಿ. (17ಪಿಸಿಎಂಸಿ) 8.ರಕ್ಷಿತ್ ಶೆಟ್ಟಿ(17ಪಿಸಿಎಂಬಿ) 9. ಗುರುಗಣೇಶ್ ಮಡ್ಡೋಡಿ (17ಪಿಸಿಎಂಸಿ) 10.ಅಭಿಷೇಕ್ (18ಪಿಸಿಎಂಸಿ) 11.ಗಗನ್(17ಪಿಸಿಎಂಎಸ್) 12.ಸಚಿನ್ (18ಪಿಸಿಎಂಬಿ) 13. ಭಾನವ್ (18ಪಿಸಿಎಂಸಿ ) 13. ಅವೋಘ್ (18ಪಿಸಿಎಂಬಿ) 14.ರಾಹುಲ್ ಭಟ್ (17ಪಿಸಿಎಂಎಸ್) 15.ಕ್ವಾಲಿನ್ (18ಪಿಸಿಎಂಬಿ)

## ಬ್ಯಾಸ್ಕೆಟ್ ಬಾಲ್ ರಾಜ್ಯಮಟ್ಟದಲ್ಲಿ ಮಿಂಚಿದ ತಂಡ



1.ಪ್ರಗತಿ ಆಚಾರ್ಯ (17ಪಿಸಿಯಂಸಿ) ತಂಡದ ನಾಯಕಿ 2.ರಂಜಿತಾ ಆರ್ ಶೆಟ್ಟಿ (17 ಪಿಸಿಯಂಬಿ) 3. ವಿನುತಾನ ದೇವರೆಡ್ಡಿ (18 ಪಿಸಿಯಂಬಿ) 4. ಶಾರ್ವರಿ (18 ಪಿಸಿಯಂಬಿ) 5.ಮಾನಸ (18 ಪಿಸಿಯಂಬಿ) 6. ಸೌರಭ ಎಸ್. (18 ಪಿಸಿಯುಂಬಿ) 7. ಭಾವನ (18 ಪಿಸಿಯುಂಬಿ) 8. ಪಿ.ಎಸ್.ಅನಿಶಾ(18 ಪಿಸಿಯಂಬಿ) 9. ಬಿ.ಎ.ಸಿರಿ(17 ಪಿಸಿಯಂಬಿ) 10.ಇಂದುಪ್ರಿಯಾ ((17ಪಿಸಿಯಂಎಸ್) 11.ಸನ್ನಿಧಿ ಎಸ್. (17ಪಿಸಿಯಂಎಸ್) 12. ಶ್ರೀರಕ್ಷಾ ಶೆಟ್ಟಿ (18ಇಬಿಎಎಸ್)

## ತ್ರೋಬಾಲ್ ಜಿಲ್ಲಾಮಟ್ಟದಲ್ಲಿ ಪ್ರತಿನಿಧಿಸಿದ ಬಾಲಕರ ತಂಡ



1.ಧವನ್ ಎಂ ಆನಂದ್ (17ಪಿಸಿಎಂಬಿ) ತಂಡದ ನಾಯಕ 2. ಪ್ರಬಲ್ ಹೊಳ್ಳ (17 ಪಿಸಿಎಂಸಿ) 3. ರಾಕೇಶ್ (17ಪಿಸಿಎಂಬಿ) 4. ವರುಣ್ (17ಪಿಸಿಎಂಬಿ) 5. ವಿಘ್ನೇಶ್ ಸುರೇಶ್ ನಾಯ್ಕ (17 ಪಿಸಿಎಂಬಿ) 6. ಇಂದುಧರ (17 ಪಿಸಿಎಂಸಿ) 7.ಚೇತನ್ ಆರ್.ಶೆಟ್ಟಿ (17 ಪಿಸಿಎಂಎಸ್) 8. ಶ್ರೇಯುಸ್ ಕೆ.ಎಸ್.(17ಪಿಸಿಎಂಬಿ) 9. ಜೀವನ್ (17ಪಿಸಿಎಂಬಿ) 10. ಚಿರಂತ್‌ಟಿ.ಎಸ್(18ಪಿಸಿಎಂಬಿ) 11. ನಿಶ್ಚಲ್ ಪ್ರಭು (18ಪಿಸಿಎಂಬಿ) 12. ವಿಕೀಲ್ ವಿ.ಶೆಟ್ಟಿ (18 ಇಬಿಎಎಸ್.)

## ತ್ರೋಬಾಲ್ ಜಿಲ್ಲಾಮಟ್ಟಕ್ಕೆ ಆಯ್ಕೆಗೊಂಡ ಬಾಲಕಿಯರ ತಂಡ



1.ಪ್ರಿಯಾಂಕ (17ಪಿಸಿಎಂಸಿ) ತಂಡದ ನಾಯಕಿ 2. ನಿಸರ್ಗ (17ಇಬಿಎಎಸ್) 3. ಅಪೂರ್ವ (18ಇಬಿಎಎಸ್) 4.ನವ್ಯ (18ಪಿಸಿಎಂಬಿ) 5.ಶಾರ್ವರಿ (18ಪಿಸಿಎಂಬಿ) 6.ಅನುದೀಪ (18ಪಿಸಿಎಂಬಿ) 7.ಸನ್ನಿಧಿ (17ಪಿಸಿಎಂಎಸ್) 8. ವೈಷ್ಣವಿ ಶೆಟ್ಟಿ(17ಇಬಿಎಎಸ್) 9. ಶ್ರಾವ್ಯ ಶೆಟ್ಟಿ (17ಪಿಸಿಎಂಸಿ) 10. ಶ್ರೀರಕ್ಷಾ ಶೆಟ್ಟಿ (18ಇಬಿಎಎಸ್) 11.ಧನ್ಯ ( 17ಇಬಿಎಎಸ್) 12.ಮಿಥಾಲಿ (18 ಪಿಸಿಎಂಎಸ್)

## ಜ್ಞಾನಸುಧಾದಲ್ಲಿ ಕ್ರೀಡಾ ಸಂಭ್ರಮ - ಬಾನೆತ್ತರಕ್ಕೆ ಏರಿದ ಕ್ರೀಡಾ ಸ್ಫೂರ್ತಿ





ಜ್ಞಾನಗೋಪಾಲ ವಿದ್ಯಾರ್ಥಿ ನಿಲಯದ ಮುಂದಿರುವ ವಿಶಾಲವಾದ ಕ್ರೀಡಾಂಗಣ ಜ್ಞಾನ ಸುಧಾ ಕಾಲೇಜಿನ ವಿದ್ಯಾರ್ಥಿಗಳ ವಾರ್ಷಿಕ ಕ್ರೀಡಾ ದಿನದ ಸಂಭ್ರಮಕ್ಕೆ ಸಾಕ್ಷಿಯಾಯಿತು. ಕಾಲೇಜಿನ ತರಗತಿವಾರು ವಿದ್ಯಾರ್ಥಿಗಳ ಆಕರ್ಷಕ ಪಥಸಂಚಲನದ ಮೂಲಕ ಗೌರವ ವಂದನೆಯನ್ನು ಸ್ವೀಕರಿಸಿದ ಉದ್ಯಮಿ ನಂದಳಿಕೆ ಚಾವಡಿ ಅರಮನೆಯ ಸುಹಾಸ್ ಹೆಗ್ಡೆ, ಕಾಲೇಜಿನ ವಾರ್ಷಿಕ ಕ್ರೀಡಾ ದಿನಾಚರಣೆಯನ್ನು ಉದ್ಘಾಟಿಸಿದರು. ಕೇಸರಿ, ಬಿಳಿ, ಹಸಿರು ಬಣ್ಣದ ಹೀಲಿಯಂ ಬಲೂನ್‌ಗಳನ್ನು ಬಾನೆತ್ತರಕ್ಕೆ ಹಾರಿಸಿ ಬಿಡುವ ಮೂಲಕ ಉದ್ಘಾಟನೆಗೊಂಡ ಕ್ರೀಡಾಕೂಟ, ಜ್ಞಾನಸುಧಾ ಮಕ್ಕಳ ಕ್ರೀಡಾ ಸ್ಫೂರ್ತಿಯನ್ನು ಕೂಡ ಬಾನೆತ್ತರಕ್ಕೆ ಏರಿಸಿತು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕ್ರೀಡಾತಾರೆಗಳು ಸಂಸ್ಥೆಯ ಆವರಣದಲ್ಲಿನ ಶ್ರೀ ಮಹಾಗಣಪತಿ ದೇವಸ್ಥಾನದಿಂದ ಕ್ರೀಡಾಜ್ಯೋತಿಯನ್ನು ಹೊತ್ತು ಕಾರ್ಯಕ್ರಮದ ಉದ್ಘಾಟಕರಿಗೆ ಹಸ್ತಾಂತರಿಸಿದರು. ಓದಿನ ಜೊತೆಗೆ ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ಜೀವನದಲ್ಲಿ ಶಿಸ್ತು ಮೂಡುತ್ತದೆ. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಆಸಕ್ತಿಯಿಂದ ಪಾಲು ಪಡೆಯಬೇಕೆಂದು ಶ್ರೀ ಸುಹಾಸ್ ಹೆಗ್ಡೆ ಅಭಿಪ್ರಾಯಪಟ್ಟರು. ಸಂಸ್ಥೆಯ ಅಧ್ಯಕ್ಷರಾದ ಡಾ. ಸುಧಾಕರ ಶೆಟ್ಟಿ ಉಪಸ್ಥಿತರಿದ್ದು, ಮಕ್ಕಳ ಕ್ರೀಡಾ ಪ್ರತಿಭೆಯನ್ನು, ಕ್ರೀಡಾ ಸ್ಫೂರ್ತಿಯನ್ನು ಕಣ್ತುಂಬಿಕೊಂಡರು. ಸಂಸ್ಥೆಯ ಟ್ರಸ್ಟಿಗಳಾದ ಶ್ರೀ ಕರುಣಾಕರಶೆಟ್ಟಿ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರ್, ಉಪಪ್ರಾಂಶುಪಾಲರಾದ ಶ್ರೀ ಸಾಹಿತ್ಯ, ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿಯಾದ ಶ್ರೀಮತಿ ಜ್ಯೋತಿ ಪದ್ಮಾನಾಭ ಭಂಡಿ , ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲೆ ಶ್ರೀಮತಿ ಉಷಾ ರಾವ್ ಯು. ಇವರು ಉಪಸ್ಥಿತರಿದ್ದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಬಜಗೋಳಿ ಸರಕಾರಿ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಶ್ರೀ ಗಣೇಶ್ ಬರ್ಲಾಯ ಮುಖ್ಯ ಅಭ್ಯಾಗತರಾಗಿ'ಶಿಕ್ಷಣದ ಜೊತೆಗೆ ಕ್ರೀಡೆಯ ಮಹತ್ವ'ವನ್ನು ನಿದರ್ಶನ ಸಹಿತ ತಿಳಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಕು.ಸೌಜನ್ಯ ಹೆಗ್ಡೆ ಈ ಕಾರ್ಯಕ್ರಮ ಸಂಘಟಿಸಿ ವಂದಿಸಿದರು. ಪ್ರಜ್ವಲ್ ಕುಲಾಲ್, ರವಿ ಜಿ ಯವರು ಕ್ರೀಡೋತ್ಸವವನ್ನು ನಿರೂಪಿಸಿದರು.



Tejaswi D Shetty bagged First prize in District level and Second prize in State level English Debate Competition conducted by the P.U.Board, Bangalore.

## ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಆಕರ್ಷಕ ಪಥಸಂಚಲನದಲ್ಲಿ ಪ್ರಥಮ ಸ್ಥಾನ ಗಳಿಸಿದ ಅಥ್ಲೇಟ್ಸ್



1.ಅಂಜನ್ (17ಪಿಸಿಎಂಸಿ) 2. ಸ್ವಸ್ತಿ ಎನ್ ಶೆಟ್ಟಿ ( 18ಪಿಸಿಎಂಬಿ) 3.ಫೆಬಾ (18ಪಿಸಿಎಂಬಿ) 4.ಅನುದೀಪ (18ಪಿಸಿಎಂಬಿ) 5.ಅಶ್ವಿನಿ (18ಪಿಸಿಎಂಬಿ) 6. ಅಭಿಜ್ಞಾ ಶೆಟ್ಟಿ (17ಪಿಸಿಎಂಬಿ) 7. ಪಿ.ಎಸ್.ಅನೀಶಾ (18ಪಿಸಿಎಂಬಿ) 8. ಪ್ರಗತಿ ಆಚಾರ್ಯ (17 ಪಿಸಿಎಂಸಿ) 9. ಚಿರಕ್ಷಾ (17 ಪಿಸಿಎಂಸಿ) 10. ಸೀಮಾ ಲೋಬೋ (18ಪಿಸಿಎಂಬಿ) 11.ಧವನ್ (17 ಪಿಸಿಎಂಬಿ) 12. ಅಶ್ರೀತ್ (17ಪಿಸಿಎಂಬಿ) 13. ರೋಹನ್ ಭಜಂತ್ರಿ (18ಪಿಸಿಎಂಎಸ್) 14.ಅಂಕುಶ್ (17ಪಿಸಿಎಂಎಸ್) 15.ಉದ್ಭವ್(17ಪಿಸಿಎಂಬಿ) 16.ಧನುಷ್ ಭಟ್ (17ಪಿಸಿಎಂಬಿ) 17.ಹರ್ಷಿತ್ ಶೆಟ್ಟಿ (17ಇಬಿಎಎಸ್) 18.ಸೃಜನ್ (18ಪಿಸಿಎಂಸಿ) 18.ಪ್ರಭಲ್ ಹೊಳ್ಳ (17ಪಿಸಿಎಂಸಿ) 19. ಪ್ರೀತಮ್ ಹೆಗ್ಡೆ ( 17ಪಿಸಿಎಂಸಿ) 20. ಸಮ್ಮೃದ್ (17ಪಿಸಿಎಂಬಿ) 21. ನಾಗರಾಜ್ (17ಪಿಸಿಎಂಸಿ)22.ಆದರ್ಶ (18ಪಿಸಿಎಂಸಿ) 23.ವಿತೀಕ್ ಲೋಬೋ (17ಪಿಸಿಎಂಸಿ) 24.ಶಮಂತ್ ಶೆಟ್ಟಿ (17ಇಬಿಎಎಸ್)

## ಬ್ಯಾಡ್‌ಮಿಂಟನ್ ಪಂದ್ಯಾಟದಲ್ಲಿ ರಾಜ್ಯಮಟ್ಟದಲ್ಲಿ ಮಿನುಗಿದ ತಂಡ

1. ನಿಯತಿ ಕೆ.ಶೆಟ್ಟಿ (18ಪಿಸಿಎಂಬಿ) ತಂಡದ ನಾಯಕಿ 2.ಟ್ರಿನಲ್ ಪ್ರೀತಷಾ ಪಿಂಟೊ(18ಪಿಸಿಎಂಸಿ) 3.ಪ್ರಗತಿ ಆಚಾರ್ಯ (17 ಪಿಸಿಎಂಸಿ)



## ಚೆಸ್ ಪಂದ್ಯಾಟದಲ್ಲಿ ರಾಜ್ಯಮಟ್ಟದಲ್ಲಿ ಮಿಂಚಿದ ಕ್ರೀಡಾ ತಾರೆಯರು

1. ಅನನ್ಯ ಬಿ. (18ಪಿಸಿಎಂಸಿ) 2. ಸುಮುಖ್ ಬಿ.(17 ಪಿಸಿಎಂಬಿ)



ಎಲ್ಲಾಸಾಧಕರೊಂದಿಗೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರು,ಉಪಪ್ರಾಂಶುಲರಾದ ಶ್ರೀ ಸಾಹಿತ್ಯ ಮತ್ತು ದೈಹಿಕ ಶಿಕ್ಷಣ ನಿರ್ದೇಶಕಿ ಕುಮಾರಿ ಸೌಜನ್ಯ ಹೆಗ್ಡೆ.

## ಪ್ರೌಢಶಾಲಾ ವಿಭಾಗ

## ಇಕೋ ಕ್ಲಬ್ ಉದ್ಘಾಟನೆ



ದಿನಾಂಕ 03-09-2018ನೇ ಸೋಮವಾರದಂದು ನಮ್ಮ ಶಾಲೆಯಲ್ಲಿ ನಡೆದಂತಹ "ಹಸಿರು ಸುಧಾ ಇಕೋ ಕ್ಲಬ್" ನ್ನು ಉದ್ಘಾಟಿಸಿದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀಮತಿ ಜ್ಯೋತಿ ಪದ್ಮನಾಭ ಭಂಡಿ ಇವರು ಭೂಮಿಯಲ್ಲಿ ನಾವು ಬದುಕಲು ಗಾಳಿ, ನೀರು, ಆಹಾರ ಅಗತ್ಯ.ಪರಿಸರವನ್ನು ವ್ಯವಸ್ಥಿತವಾಗಿಡಲು ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ಹೇಳಿದರು.

## ಜ್ಞಾನಸುಧಾದಲ್ಲಿ ಶಿಕ್ಷಕರ ದಿನಾಚರಣೆ:"ಗುರಿತೋರೋ ಗುರುವಿಗೊಂದು ನಮನ"



ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಬೇಕು. ವಿದ್ಯಾರ್ಥಿಗಳ ಭವ್ಯ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳಾಗಬೇಕು. ವಿದ್ಯಾರ್ಥಿಗಳು ಎಲ್ಲಾ ಸಂದರ್ಭಗಳಲ್ಲಿ ಶಿಕ್ಷಕರ ಮಾರ್ಗದರ್ಶನ, ಸಲಹೆ ಸೂಚನೆಗಳಿಂದ ಹಿಂದೆ ಸರಿಯದೆ ದೇವರ ಮೂರ್ತಿಗಳಾಗಿ ಪೂಜಿಸಲರ್ಹರಾಗಬೇಕು ಎಂದು ಮುಕ್ತ ಸಮಾಲೋಚಕರಾದ ಡಾ.ಪ್ರಸನ್ನ ಹೆಗ್ಡೆಯವರು ಹೇಳಿದರು. ಇವರು ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಯುತ ಲಕ್ಷ್ಮೀಕಾಂತ್ ಭಟ್ ಇವರು ಮಾತನಾಡಿ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಂಡಾಜೆಯ ನಿವೃತ್ತ ಮುಖ್ಯ ಶಿಕ್ಷಕರಾದ ಕೆ.ಉಮೇಶ್ ಭಟ್, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನೆಲ್ಲಿಕಾರಿನ ನಿವೃತ್ತ ಶಿಕ್ಷಕಿ ಶ್ರೀಮತಿ ವಿಮಲಾ ಸುದರ್ಶನ್, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮೂಡಬಿದ್ರೆಯ ನಿವೃತ್ತ ಶಿಕ್ಷಕಿ ಶ್ರೀಮತಿ ಬಿ.ಸರಸ್ವತಿ ಈ ಮೂವರನ್ನು ಸಮಸ್ತ ಶಿಕ್ಷಕರ ಪರವಾಗಿ ಸನ್ಮಾನಿಸಿ, ಆರತಿ ಬೆಳಗಿ, ಆಶೀರ್ವಾದ ಪಡೆಯಲಾಯಿತು.

## ಜ್ಞಾನಸುಧಾದಲ್ಲಿ ವಾರ್ಷಿಕ ಕ್ರೀಡಾಕೂಟ 2018-19



ಪಾಠದ ಜೊತೆಗೆ ಆಟಕ್ಕೂ ಪ್ರಾಮುಖ್ಯತೆಯನ್ನು ನೀಡಿ ವಿದ್ಯಾರ್ಥಿಗಳನ್ನು ಸದೃಢರನ್ನಾಗಿ ಮಾಡಲು ಕ್ರೀಡಾಕೂಟ ವೇದಿಕೆಯಾಗುತ್ತದೆ. ಕ್ರೀಡೆಯು ಮಕ್ಕಳ ದೇಹಾರೋಗ್ಯವನ್ನು ಕಾಪಾಡಿ ಓದುವಿಕೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ ಎಂದು ಕಾರ್ಕಳದ ಅಡ್ವೊಕೇಟ್ ಮತ್ತು ನೋಟರಿಯಾದ ಶ್ರೀಮತಿ ನಂದಿನಿ ಬಿ ಶೆಟ್ಟಿಯವರು ಹೇಳಿದರು.

ಇವರು ದಿ:30-10-2018ರಂದು ಕಾರ್ಕಳ ಜ್ಞಾನಸುಧಾ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ನಡೆದ 2018-19ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಟ್ರಸ್ಟಿಗಳಾದ ಶ್ರೀಯುತ ಕರುಣಾಕರ ಶೆಟ್ಟಿ, ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಯುತ ದಿನೇಶ್ ಎಂ ಕೊಡವೂರು, ಸಾರ್ವಜನಿಕ ಸಂಪರ್ಕಾಧಿಕಾರಿಯಾದ ಶ್ರೀಮತಿ ಜ್ಯೋತಿ ಪದ್ಮನಾಭ ಭಂಡಿ, ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯ ಪ್ರಾಂಶುಪಾಲೆಯಾದ ಶ್ರೀಮತಿ ಉಷಾ ರಾವ್‌ಯು., ಉಪಪ್ರಾಂಶುಪಾಲೆಯಾದ ಶ್ರೀಮತಿ ವಾಣಿ ಕೆ. ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀಯುತ ಅರುಣ್‌ಕುಮಾರ್‌ರವರು ಉಪಸ್ಥಿತರಿದ್ದರು. ಶಿಕ್ಷಕಿ ಶ್ರೀಮತಿ ಪ್ರಿಯಾ ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ರೇಷ್ಮಾ ಸಾಲಿಸ್ ವಂದಿಸಿದರು.ಶಿಕ್ಷಕಿ ಕುಮಾರಿ ಶಿಲ್ಪಾ ನಿರೂಪಿಸಿದರು.

## ಸಮಾರೋಪ ಸಮಾರಂಭ



ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಶ್ರೀ.ಎನ್.ಅರವಿಂದ ಕುಮಾರ್, ಮುಖ್ಯೋಪಾಧ್ಯಾಯರು, ಡಾ.ಎನ್.ಎಸ್.ಎ.ಎಮ್‌ಕನ್ನಡ ಮಾಧ್ಯಮ ಪ್ರೌಢಶಾಲೆ, ನಿಟ್ಟೆ, ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ್ ಶೆಟ್ಟಿಯವರು ಹಾಗೂ ಟ್ರಸ್ಟಿಯವರಾದ ಶ್ರೀ ಕರುಣಾಕರ ಶೆಟ್ಟಿ , ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಪ್ರಾಂಶುಪಾಲೆಯಾದ ಶ್ರೀಮತಿ ಉಷಾ ರಾವ್‌ಯು , ಕುಕ್ಕುಂದೂರು ಗ್ರಾಮ ಪಂಚಾಯತ್‌ಅಧ್ಯಕ್ಷರಾದ ಶ್ರೀಮತಿ ಸುಮನಾ ರಾವ್ ಹಾಗೂ ಸದಸ್ಯರಾದ ಶ್ರೀ ರೆಹಮತುಲ್ಲರವರು ಉಪಸ್ಥಿತರಿದ್ದರು.ಕುಮಾರಿ ಶಿಲ್ಪಾ ಬಂದಿರುವಂತಹ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿ ಕುಮಾರಿ ಕಾವ್ಯ ಕಾರ್ಯಕ್ರಮ ನಿರೂಪಿಸಿದರು.ಶ್ರೀಮತಿ ಶೋಭಾ ಪೈ ಬಿ ಯವರು ವಂದನಾರ್ಪಣೆ ಸಲ್ಲಿಸಿದರು.

## 'ದೇಶ ರಕ್ಷಣೆಯಲ್ಲಿ ವಾಯುಸೇನೆಯ ಪಾತ್ರ'

ದಿನಾಂಕ 8 ಮಾರ್ಚ್ 2019ರ ಶುಕ್ರವಾರದಂದು ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆಯ ಎನ್ ಸಿ ಸಿ ಘಟಕದ ವತಿಯಿಂದ 'ದೇಶ ರಕ್ಷಣೆಯಲ್ಲಿ ವಾಯುಸೇನೆಯ ಪಾತ್ರ' ಎಂಬ ವಿಷಯದ ಕುರಿತಂತೆ ಕಾರ್ಯಕ್ರಮ ವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಭ್ಯಾಗತರಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಭಾರತೀಯ ವಾಯು ಸೇನೆಯ ಶ್ರೀ ಎಚ್ ಡಿ ಕುಲಾಲ್ ಮಾತನಾಡುತ್ತಾ, "ದೇಶದ ರಕ್ಷಣೆಯಲ್ಲಿ ಭಾರತದ ವಾಯುಸೇನೆಯ ಪಾತ್ರ ಮಹತ್ವದ್ದು. ಶೌರ್ಯ ಸಾಹಸಗಳಿಂದ ಇಡೀ ದೇಶಾದಾದ್ಯಂತ ಮಾತ್ರವಲ್ಲದೆ ಜಗತ್ತಿನಾದ್ಯಂತ ಪ್ರಸಿದ್ಧವಾಗಿದೆ. ಎಂದು ಸಾರಿದರು. ಜೊತೆಗೆ ನೆರೆದ ವಿದ್ಯಾರ್ಥಿಗಳಿಗೆ ವಾಯು ಸೇನೆಗೆ ಸೇರಲು ಇರುವ ಅರ್ಹತೆಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭ ಅಜೆಕಾರ್ ಪದ್ಮಗೋಪಾಲ ಎಜುಕೇಶನ್ ಟ್ರಸ್ಟ್ ನ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿ , ಪ್ರಾಂಶುಪಾಲೆ ಶ್ರೀ ಮತಿ ಉಷಾ ರಾವ್ ಯು ಹಾಗೂ ಎನ್ ಸಿ ಸಿ ಮುಖ್ಯಸ್ಥ ಶ್ರೀ ಸುಮಿತ್ ಉಪಸ್ಥಿತರಿದ್ದರು.

## Harmony

Nature also said to be a preacher
Makes all the creatures to realise the definition of patience.
Because she's struggling to survive all the invasions;
But still cares a lot for the lives in her habitation
All in vain but still bearing the pain she is facing the situations,
Well she is a mother full of patience
Controlling her frustration.

She's just like the sea which is calm and cool
Blowing her cool breeze to soothe our warm rooms;
But like how the raging sea can swallow the whole world in her shadows
Blowing her stormy winds and bringing this world to gloom;
The same way she brings out killer waves to clean all the dirty places;
This is how she teaches her children
To pray to her and not to prey on her.

We all are her creations;
But we are an infection to her perfections;
Trying to build a world of innovation with useless creations
While we are forgetting that it is our imagination without any limitation
Which is making us lose all our patience;
Hope we do realize that this is not a play-station;
Well at least for the sake of next generation.

**Shree Ram P.B**
17PCMC

## ಜ್ಞಾನಸುಧಾದಲ್ಲಿ ಮೈಸೂರು ವಿಭಾಗೀಯ ಮಟ್ಟದ ಯೋಗಾಸನ ಸ್ಪರ್ಧೆ:



ವಿಶ್ವಕ್ಕೆ ಯೋಗವನ್ನು ಪರಿಚಯಿಸಿದ ರಾಷ್ಟ್ರ ಭಾರತವೆಂಬುದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿ. ಯೋಗವು ನಮ್ಮಲ್ಲಿರುವ ಕೀಳರಿಮೆ ಗುಣವನ್ನು ಹೋಗಲಾಡಿಸಿ ಬಂದ ಸೋಲುಗಳನ್ನು ಎದುರಿಸಿ ಜಯದ ಕದ ತಟ್ಟುವಂತೆ ಮಾಡುವ ಆತ್ಮವಿಶ್ವಾಸವನ್ನು ಬೆಳೆಸಬೇಕು ಎಂದು ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ್ ಶೆಟ್ಟಿಯವರು ಹೇಳಿದರು. ಇವರು ಉಡುಪಿ ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಾರ್ಕಳ ಹಾಗೂ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಗಣಿತನಗರ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಮೈಸೂರು ವಿಭಾಗೀಯ ಮಟ್ಟದ ಯೋಗಾಸನ ಸ್ಪರ್ಧೆಯ ಉದ್ಘಾಟನೆಯನ್ನು ನೇರವೇರಿಸಿ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀಯುತ ಮಧುಕರ್ ಇವರು ಮಾತನಾಡಿ ಸ್ಪರ್ಧೆಯು ನಡೆಯುವ ರೀತಿ, ಜಿಲ್ಲಾವಾರು ಸ್ಪರ್ಧಿಗಳ ವಿವರಗಳ ಬಗ್ಗೆ ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಅಭಿವೃದ್ಧಿ)ರಾದ ಶ್ರೀಮತಿ ಭಾಗ್ಯಲಕ್ಷ್ಮಿ, ಉಡುಪಿ ಜಿಲ್ಲಾದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀಯುತ ಚಂದ್ರಶೇಖರ್ ಶೆಟ್ಟಿ, ಕಾರ್ಕಳ ತಾಲೂಕು ದೈಹಿಕ ಶಿಕ್ಷಣ ಪರೀವಿಕ್ಷಣಾಧಿಕಾರಿಗಳಾದ ಶ್ರೀಯುತ ಸಿದ್ಧಪ್ಪ, ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಯುತ ಶಾಂತಿರಾಜ್ ಹೆಗ್ಡೆ, ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಪ್ರಾಂಶುಪಾಲೆಯಾದ ಶ್ರೀಮತಿ ಉಷಾ ರಾವ್‌ಯು., ಉಪಪ್ರಾಂಶುಪಾಲೆಯಾದ ಶ್ರೀಮತಿ ವಾಣಿ ಕೆ. ಉಪಸ್ಥಿತರಿದ್ದರು.ಪ್ರೌಢಶಾಲೆ ವಿಭಾಗದ ಪ್ರಾಂಶುಪಾಲರಾದ ಉಷಾ ರಾವ್‌ಯು ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕಿ ರೇಷ್ಮಾ ಸಾಲಿಸ್ ವಂದಿಸಿದರು.ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕ ಸುಹಾಸ್ ಶೆಟ್ಟಿ ನಿರೂಪಿಸಿದರು.

**ಸಮಾರೋಪ ಸಮಾರಂಭ**

2018-19 ನೇ ಸಾಲಿನ ಮೈಸೂರು ವಿಭಾಗೀಯ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ ಬಾಲಕಿಯರ ಯೋಗಾಸನ ಸ್ಪರ್ಧೆಯ ಸಮಾರೋಪ ಸಮಾರಂಭದ ಸಭಾಕಾರ್ಯಕ್ರಮದಲ್ಲಿ ಅಜೆಕಾರು ಪದ್ಮಗೋಪಾಲ್ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಗಣಪತಿ ಪೈ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಜೆಕಾರು ಪದ್ಮಗೋಪಾಲ್ ವಿದ್ಯಾಸಂಸ್ಥೆಯ ಟ್ರಸ್ಟಿ ಕರುಣಾಕರ ಶೆಟ್ಟಿ ಉಡುಪಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸಿದ್ಧಪ್ಪ ಎಸ್., ಜ್ಞಾನಸುಧಾ ಪ.ಪೂ.ಕಾಲೇಜಿನ ಪ್ರಾಂಶುಪಾಲ ದಿನೇಶ್ ಎಂ. ಕೊಡವೂರು, ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಉಷಾ ರಾವ್ ಯು. ಉಪಸ್ಥಿತರಿದ್ದರು.

ಉಪಪ್ರಾಂಶುಪಾಲರಾದ ವಾಣಿ ಕೆ.ಸ್ವಾಗತಿಸಿ, ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕ ಪ್ರಜ್ವಲ್ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಅರುಣ್‌ಕುಮಾರ್ ವಂದಿಸಿದರು.

## ಜ್ಞಾನಸಂಭ್ರಮದಲ್ಲಿ ಪ್ರೊ.ಎಂ. ಬಾಲಕೃಷ್ಣ ಶೆಟ್ಟಿ ಯವರ ಅಮೃತವಾಣಿ



ಹೆತ್ತವರನ್ನು ಗೌರವಿಸಬೇಕು ಎಂಬ ಸಂದೇಶ ಸಾರುವ ಸಂಸ್ಥೆಯಿದು. ಜ್ಞಾನದೀಪವೆಂಬ ಜ್ಞಾನಸುಧಾವನ್ನು ಬೆಳಗಲು ಡಾ.ಸುಧಾಕರ್ ಸರ್ ಜೊತೆ ಬೆಂಕಿಕಡ್ಡಿಯ ಹಾಗೆ ತಮ್ಮನ್ನುತಾವು ಸುಟ್ಟುಕೊಂಡವರು ಈ ಸಂಸ್ಥೆಯಲ್ಲಿದ್ದಾರೆ ಹಾಗೂ ಆರತಿ ತರಹ ಬೆಳಗುತ್ತಾ ಶ್ರಮ ವಹಿಸಿ ತಮ್ಮನ್ನುತಾವು ತೊಡಗಿಸಿಕೊಂಡು ಸಂಸ್ಥೆಯನ್ನುಕಟ್ಟಿ ಬೆಳೆಸುವುದಕ್ಕೆ ಸಹಕಾರಿಯಾಗಿದ್ದಾರೆ. ನನ್ನ ಮಾತುಗಳನ್ನು ಮಕ್ಕಳಿಗಾಗಿ, ಪೋಷಕರಿಗಾಗಿ, ಶಿಕ್ಷಕರಿಗಾಗಿ ಹೀಗೆ ಮೂರು ವಿಭಾಗವಾಗಿ ವಿಂಗಡಿಸಲಿಚ್ಛಿಸುವ ನಾನು ಮೊದಲಿಗೆ ಮಕ್ಕಳನ್ನು ಉದ್ದೇಶಿಸಿ ಮಾತನಾಡುತ್ತೇನೆ.

ಅವಕಾಶ ಅನ್ನುವ ಅದ್ಭುತ ಪದ ಮಕ್ಕಳ ಯಶಸ್ಸಿನ ಹಿಂದಿರುವ ಅದೃಷ್ಟ. ಸಿಕ್ಕ ಅವಕಾಶವನ್ನುಯಾರು ಸದುಪಯೋಗ ಪಡಿಸಿಕೊಳ್ಳುತ್ತಾರೋ ಅವರು ಜೀವನದಲ್ಲಿ ಸಾಧನೆ ಮಾಡುತ್ತಾರೆ. ವಿದ್ಯಾರ್ಥಿಗಳು ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳದೆ ಮೂಲೆ ಗುಂಪಾಗಬಾರದು. ನಿರಂತರ ಪರಿಶ್ರಮ ಮಕ್ಕಳ ಮೂಲಮಂತ್ರವಾಗಬೇಕು.

ಮಕ್ಕಳನ್ನು ಬೆಳೆಸುವಲ್ಲಿ ಸಮಸ್ಯೆಗೆ ಗುರಿಯಾದವರು ಪೋಷಕರು. ಮಕ್ಕಳನ್ನು ಸ್ಪರ್ಧಾತ್ಮಕವಾಗಿ ಬೆಳೆಸುವುದೇ ಒಂದು ದೊಡ್ಡ ಸವಾಲಾಗಿರುತ್ತದೆ. ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು. ಹೀಗಾಗಿ ಮಕ್ಕಳನ್ನು ಬೆಳೆಸುವುದರಲ್ಲಿ ತಾಯಿಯ ಪಾತ್ರ ಹಿರಿದು. ಪೋಷಕರು ಪಟ್ಟ ಕಷ್ಟ ತಮ್ಮ ಮಕ್ಕಳಿಗೆ ಬರಬಾರದೆಂದು ಮುದ್ದಾಗಿ ಸಾಕುತ್ತಾರೆ. ಆದರೆ ಮಕ್ಕಳಿಗೆ ಸೋಲುವುದನ್ನು ಕೂಡ ಕಲಿಸಬೇಕು. ಎಲ್ಲಾ ಕಡೆ ಗೆಲುವು ಬಂದು ಒಂದು ಕಡೆ ಸೋಲಾದಾಗ ಅವರಿಗೆ ಸಹಿಸಿಕೊಳ್ಳಲಾಗುವುದಿಲ್ಲ. ಸೋಲಿನ ಅನುಭವವಿದ್ದು ಗೆಲುವು ಸಿಕ್ಕಿದಾಗ ಅದು ಬದುಕಿಗೆ ಪಾಠವಾಗುತ್ತದೆ. ದೇವಿ ಸರಸ್ವತಿಯ ಕೈಗಳಲ್ಲಿ ನಾವು ಬರೀ ಪುಸ್ತಕಗಳನ್ನೇ ನೋಡುವುದಿಲ್ಲ. ಬದಲಾಗಿ ವೀಣೆ, ಜಪಮಾಲೆಯನ್ನು ನೋಡುತ್ತೇವೆ. ಓದಿಗೆ ಪೂರಕವೆಂಬಂತೆ ಕಲೆ, ಸಂಸ್ಕೃತಿ, ಆಧ್ಯಾತ್ಮಿಕ ತಿಳಿವಳಿಕೆ ಹಾಗು ಲೋಕ ಜ್ಞಾನವು ಅವಶ್ಯಕವಾಗಿರುತ್ತದೆ. ಹೆತ್ತವರು ತಮ್ಮ ಸಮಯವನ್ನು ಮಕ್ಕಳಿಗೆ ಮೀಸಲಿಡುವುದು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ. ಪೋಷಕರು ತಮ್ಮ ಮನೆಯಲ್ಲಿ ಮಕ್ಕಳ ಮುಂದೆ ಶಿಕ್ಷಕರ ಬಗ್ಗೆ ಕೀಳಾಗಿ ಮಾತನಾಡದೆ ಗೌರವಯುತವಾಗಿ ಮಾತನಾಡಬೇಕು. ಮೂರನೆಯದಾಗಿ ಶಿಕ್ಷಕರಿಗೊಂದಿಷ್ಟು ಮಾತು. ಶಿಸ್ತಿಗೆ ಪ್ರತಿರೂಪರಾದ ಶಿಕ್ಷಕರು ಮಕ್ಕಳೆಂಬ ಗಾಳಿಪಟದ ಸೂತ್ರದಾರರಿದ್ದಂತೆ . ಸೂತ್ರದಾರರಿಲ್ಲದ ಗಾಳಿಪಟ ಧೂಳಿಪಟವಾಗುತ್ತದೆ. ಬೇರಾವ ವ್ಯಕ್ತಿ ಮಾಡುವ ತಪ್ಪುಗಳು ಗಂಭೀರ ಪರಿಣಾಮ ಬೀರದೇ ಇದ್ದರೂ ಶಿಕ್ಷಕನ ತಪ್ಪು ಒಂದು ಜನಾಂಗವನ್ನು ಹಾಳು ಮಾಡುವ ಶಕ್ತಿ ಹೊಂದಿದೆ. ಆದ್ದರಿಂದ ಶಿಕ್ಷಕನಾದವ ತನ್ನಿಂದ ತಪ್ಪಾಗದಂತೆ ನೋಡಿಕೊಳ್ಳಬೇಕು. ತರಗತಿಯಲ್ಲಿರುವ ಮಕ್ಕಳನ್ನು ತನ್ನ ಮಕ್ಕಳೆಂದು ಪಾಠ ಮಾಡಬೇಕು. ಪೋಷಕರು ಮಕ್ಕಳನ್ನು ತನ್ನ ಮಕ್ಕಳಲ್ಲ ಎನ್ನುವಂತೆ ಪ್ರೀತಿಸಬೇಕು. ಶಿಕ್ಷಕರು ಬರೀ ಸಂಬಳಕ್ಕಾಗಿ ಕಾಯಬಾರದು. ಇದಿಷ್ಟು ಶಿಕ್ಷಕರಿಗೆ ನನ್ನ ಕಿವಿಮಾತು.

ಜ್ಞಾನವೇ ಯಶಸ್ಸಿನ ಕೀಲಿಕೈ, ಜ್ಞಾನವೇ ಶಕ್ತಿ. ಭೂಲೋಕದಲ್ಲಿ ಗಣಿತನಗರ ಅನ್ನೋ ಹೆಸರು ಬೇರೆ ಎಲ್ಲೂ ಇರಲು ಸಾಧ್ಯವಿಲ್ಲ. ಅಂತರಾಷ್ಟ್ರೀಯ ಮಟ್ಟದ ಗಣಿತಜ್ಞ ಗಣಿತದ ಮೇಲಿನ ಪ್ರೀತಿಯಿಂದ ಇಟ್ಟಿರುವ ಹೆಸರು ಇದಾಗಿದೆ. ಗಣಿತನಗರದ ಜ್ಞಾನಸುಧಾದಲ್ಲಿ ಎಷ್ಟೋ ಕುಟುಂಬಗಳ ಕನಸುಗಳಿವೆ. ಅವರೆಲ್ಲರ ಕನಸುಗಳನ್ನು ನನಸಾಗಿಸುವ ಲೋಕಕಲ್ಯಾಣದಲ್ಲಿ ತೊಡಗಿಸಿಕೊಂಡಿರುವ ಈ ಸಂಸ್ಥೆ ನಿಜಕ್ಕೂ ಧನ್ಯ.

## ಕವನ

### ನಮ್ಮ ಶಾಲೆ

ಜ್ಞಾನಕ್ಕೆ ಹೆಸರು ಈ ನಮ್ಮ ಶಾಲೆ
ನಡತೆಗೆ ಬೆಲೆ ಬಾಳುವ ನಮ್ಮೀ ಶಾಲೆ
ಸುಧೆಯಾಗಿ ಹರಿಯುತ್ತಿದೆ ನಿರಂತರ ಶಿಕ್ಷಣ
ಧರೆಯಲ್ಲೇ ಸ್ವರ್ಗವ ತೋರುವ ಗುರುಗಳ ಋಣ
ಭಕ್ತಿಯನ್ನು ಸಾರುವ ಗಣಪತಿಯ ದೇಗುಲ
ಬಾಲಗೋಪಾಲರು ನೆಲೆಸಿರುವ ಜ್ಞಾನ ಗೋಪಾಲ
ಸ್ನೇಹಕ್ಕೆ ಪ್ರೀತಿಗೆ ಸಿಂಚನ ನಮ್ಮೀ ಶಾಲೆ
ಭವಿಷ್ಯಕ್ಕೊಂದು ನೆಲೆ ಅದ್ಭುತ ಈ ಶಾಲೆ
ಶಿಸ್ತಿನ ಸಿಪಾಯಿಗಳು ಇಲ್ಲಿನ ಮಕ್ಕಳು
ವಠಾರಕ್ಕೊಂದು ಸೊಬಗು ಅಲ್ಲಲ್ಲಿ ಹೂಕುಂಡಗಳು
ಆತಿಥ್ಯಕ್ಕೊಂದು ಮೆರಗು ಈ ಊರು
ಕೈ ಬೀಸಿ ಕರೆಯುತ್ತಿದೆ ಕಟ್ಟಡದ ಹೆಸರು
ವಿಶಾಲ ಹೃದಯಕ್ಕೊಂದು ಸಾಕ್ಷಿ ಈ ಪರಿಸರ
ಅನೇಕ ಭಾವನೆಗಳ ಸಮ್ಮಿಶ್ರಣ ಸರಕಾರ
ಸಪ್ತ ಸ್ವರಗಳ ನಾದ ಗುನುಗುತ್ತಿದೆ
ಕಲೆಗೆ ನೆಲೆಯಾಗಿ ಹೊಸ ಮನಸ್ಸುಗಳು ಅರಳುತ್ತಿದೆ.
ಮರೆಯದೇ ಒಂದೊಮ್ಮೆ ಬನ್ನಿ ಇಲ್ಲಿ
ಮರೆಯಾಗುವುದು ನಿಮ್ಮತನವೊಂದು ಇಲ್ಲಿ
ಹೊಸ ಭರವಸೆ, ಹೊಸ ಯೋಜನೆಗಳ ತನ್ನಿ
ಜ್ಞಾನ ಸುಧೆಗೆ ಅಲೆಯಾಗಿ ಹರಿವಾಗಿ ಬನ್ನಿ




**ಅನುಷ್ಕಾ ಜಿ. ಪ್ರಭು**
೯ನೇ ತರಗತಿ

# ಜ್ಞಾನಸುಧಾದ ಕ್ರೀಡಾ ಪ್ರತಿಭೆಗಳು

## ಸಾರ್ವಜನಿಕ ಶಿಕ್ಷಣ ಇಲಾಖೆ ಕಾರ್ಕಳ ,ಉಡುಪಿ ಜಿಲ್ಲಾ ಪಂಚಾಯತ್ ಸಾ.ಶಿ.ಇಲಾಖೆ ಉಡುಪಿ ಜಿಲ್ಲೆ ಇವರು ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದವರು




### ತಾಲೂಕು ಮಟ್ಟದ ಫುಟ್ಬಾಲ್ ಪಂದ್ಯಾಟದ ವಿಜೇತರು

1.ಕೆ.ತುಷಾರ್ ರಾಜ್(10ನೇ ತರಗತಿ)–ತಂಡದ ನಾಯಕ, 2.ನವರಾಜ್ ಡಿ ಶೆಟ್ಟಿ (10ನೇ ತರಗತಿ) 3.ಎ.ನರೇಶ್ ಭೈರವ್(10ನೇ ತರಗತಿ) 4.ವಿಘ್ನೇಶ್ ಭಟ್(10ನೇ ತರಗತಿ) 5.ನಾಗಪ್ರಸನ್ನ ಹೆಬ್ರಿ(10ನೇ ತರಗತಿ) 6.ಮಲ್ಲಿಕಾರ್ಜುನ ಎನ್ಎ(10ನೇ ತರಗತಿ) 7.ಸುಪ್ರಿತ್ ಎಸ್‌ಕರ್ಕೇರ(10ನೇ ತರಗತಿ 8.ಸುಶಾಂತ್ ಶೆಟ್ಟಿ(10ನೇ ತರಗತಿ 9.ಅನೂಪ್ ಜಿ ರಾವ್(9ನೇ ತರಗತಿ) 10.ಗುರುದೀಪ್ ಎಂ ಶೆಟ್ಟಿ(9ನೇ ತರಗತಿ) 11.ಪ್ರತೀಕ್ ಎಂ ಶೆಟ್ಟಿ(9ನೇ ತರಗತಿ) 12.ಅಖಿಲ್ ಯು ವಾಗ್ಲೆ(9ನೇ ತರಗತಿ)13.ಆರ್ಯನ್ ಶೆಟ್ಟಿ(9ನೇ ತರಗತಿ)

### ತಾಲೂಕು ಮಟ್ಟದ ಚದುರಂಗ ಸ್ಪರ್ಧೆಯ ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದವರು


ಮನೋಜ್ ಕಾಮತ್
6ನೇ ತರಗತಿ


ಆಯುಷ್ ಎಸ್ ರಾವ್
6ನೇ ತರಗತಿ


ಮಾನ್ಯ ಜೈನ್
8ನೇ ತರಗತಿ


ಸಾತ್ವಿಕ್ ಪ್ರಭು
9ನೇ ತರಗತಿ


ಸಾಕ್ಷಿಯು ಶೆಟ್ಟಿ
9ನೇ ತರಗತಿ


ಶ್ರೀಲಕ್ಷ್ಮೀ ಪಿ ನಾಯ್ಕ
9ನೇ ತರಗತಿ


ನವರಾಜ್ ಡಿ ಶೆಟ್ಟಿ
10ನೇ ತರಗತಿ


ನವರಾಜ್ ಡಿ ಶೆಟ್ಟಿ
10ನೇ ತರಗತಿ


ಅನೂಪ್ ಜಿ ರಾವ್
9ನೇ ತರಗತಿ

### ಜಿಲ್ಲಾ ಮಟ್ಟದಕ್ರಿಕೆಟ್ ಪಂದ್ಯಾಟದಲ್ಲಿ ವಿಜೇತರಾಗಿ ಮೈಸೂರು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾದವರು


ಪ್ರಣಯ್ ಶೆಟ್ಟಿ
6ನೇ ತರಗತಿ
100mtrs- III - 200mtrs- II
Long jump- II


ಗವೀಶ್ ಪ್ರಭು
7ನೇ ತರಗತಿ
Discuss throw -III

### ವಲಯ ಮಟ್ಟದಕ್ರೀಡಾಕೂಟದಲ್ಲಿ ಭಾಗವಹಿಸಿ ತಾಲೂಕು ಮಟ್ಟದಲ್ಲಿಆಯ್ಕೆಯಾದವರು




### ವಲಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟದ ವಿಜೇತರು

1. ದೀಶ್ ಶೆಟ್ಟಿ(7ನೇ ತರಗತಿ)
2. ಉಲ್ಲಾಸ್ ಪ್ರಭು(7ನೇ ತರಗತಿ)
3. ಆದಿತ್ಯ ಕುಮಾರ್(7ನೇ ತರಗತಿ)


ಜೋಶು ವ ಡಿಸೋಜ
9ನೇ ತರಗತಿ

### ಜಿಲ್ಲಾ ಮಟ್ಟದ ಫುಟ್ಬಾಲ್ ಪಂದ್ಯಾಟದಲ್ಲಿ ವಿಜೇತನಾಗಿ ಮೈಸೂರು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿ


ಅಂಕಿತ್ ಭಾಗವ್
8ನೇ ತರಗತಿ

### ತಾಲೂಕು ಮಟ್ಟದತ್ರೋಬಾಲ್ ಪಂದ್ಯಾಟದಲ್ಲಿ ವಿಜೇತನಾಗಿಜಿಲ್ಲಾಮಟ್ಟಕ್ಕೆಆಯ್ಕೆಯಾದ ವಿದ್ಯಾರ್ಥಿ

## ಚದುರಂಗದ ಚತುರ ಪ್ರತಿಭೆ: ಸಾತ್ವಿಕ್ ಪ್ರಭು



ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಸಾತ್ವಿಕ್ ಪ್ರಭು ಇವರು ಚದುರಂಗದಲ್ಲಿ ಈಗಾಗಲೇ ಹಲವು ಸಾಧನೆಗಳನ್ನು ಮಾಡಿದ್ದಾರೆ. ಕಾರ್ಕಳದ ನಿತ್ಯಾನಂದ ಪ್ರಭು ಹಾಗೂ ಜ್ಯೋತಿ ಪ್ರಭು ದಂಪತಿಗಳ ಪುತ್ರರಾದ ಇವರು, ಓದಿನಲ್ಲೂ ಸದಾ ಮುಂದು. 2015 ರಿಂದ ಸತತ ನಾಲ್ಕು ಬಾರಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಇವರ 2018 ರ ಸಾಧನೆಯ ಹಿನ್ನೋಟ ಇಲ್ಲಿದೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ನಡೆದ ತಾಲೂಕು ಮಟ್ಟದ ಬಾಲಕ ಬಾಲಕಿಯರ ಚೆಸ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆ

ಕುಂದಾಪುರದಲ್ಲಿ ನಡೆದ ಜಿಲ್ಲಾ ಮಟ್ಟದ ಪಂದ್ಯಾಟದಲ್ಲಿ ಗೆದ್ದು ರಾಜ್ಯಮಟ್ಟಕ್ಕೆ ಆಯ್ಕೆ

ಮಧುಗಿರಿಯಲ್ಲಿ ನಡೆದ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಏಳನೆ ಸ್ಥಾನ ಗಳಿಕೆ

ಇದಲ್ಲದೆ 2018ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಮುಕ್ತ ರೇಟಿಂಗ್ ಚೆಸ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನ

ಪರ್ಕಳದಲ್ಲಿ ನಡೆದ ಅಂತರ್ ಜಿಲ್ಲಾ ಮಟ್ಟದ ಚೆಸ್ ನಲ್ಲಿ ದ್ವಿತೀಯ ಸ್ಥಾನ

ಹುಬ್ಬಳ್ಳಿಯಲ್ಲಿ 2019ರಲ್ಲಿ ನಡೆದ 16ರ ಕೆಳಗಿನ ವಯೋಮಿತಿಯ ವಿಭಾಗದ ನಾಲ್ಕನೇ ಅಖಿಲ ಭಾರತ ಮುಕ್ತ ರೇಟಿಂಗ್ ಚೆಸ್ ನಲ್ಲಿ ಮೂರನೇ ಸ್ಥಾನ

ಇವರ ಈ ಎಲ್ಲಾ ಸಾಧನೆ ಗಳಿಗೆ ಜ್ಞಾನಸುಧಾ ಪರಿವಾರದ ಅಭಿನಂಧನೆಗಳು

## ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದಿ ವಿಚಾರಗೋಷ್ಠಿ






ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ವಿಜಯ ಬ್ಯಾಂಕ್ ಕ್ಷೇತ್ರೀಯ ಕಾರ್ಯಾಲಯ ಉಡುಪಿ, ಇದರ ಸಹಯೋಗದೊಂದಿಗೆ ಹಿಂದಿ ವಿಚಾರಗೋಷ್ಠಿಯನ್ನು ಆಯೋಜಿಸಲಾಯಿತು. ಕಾಲೇಜಿನ ವಿದ್ಯಾರ್ಥಿಗಳು ಹಿಂದಿ ಭಾಷೆ , ಸಮಾಜ ಮತ್ತು ಬ್ಯಾಂಕ್‌ನ ಸಂಬಂಧದ ಬಗ್ಗೆ ತಮ್ಮ ವಿಚಾರವನ್ನು ಮಂಡಿಸಿದರು. ವಿಜಯ ಬ್ಯಾಂಕ್ ಕಾರ್ಕಳ ಶಾಖೆಯ ಮ್ಯಾನೇಜರ್ ಶ್ರೀ ಗೋವಿಂದ , ವಿಜಯ ಬ್ಯಾಂಕ್ ಕುಕ್ಕುಂದೂರು ಶಾಖೆಯ ಮ್ಯಾನೇಜರ್ ಶ್ರೀ ವಿಷ್ಣು ಕುಮಾರ್ ಗುಪ್ತ , ಉಡುಪಿ ವಿಜಯ ಬ್ಯಾಂಕ್‌ನಲ್ಲಿ ಹಿಂದಿ ರಾಜಭಾಷಾ ಅಧಿಕಾರಿಯಾದ ಶ್ರೀಮತಿ ಮಾಯಾ ಉನ್ನಿ , ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ. ಕೊಡವೂರು ಹಾಗೂ ಹಿಂದಿ ವಿಭಾಗದ ಮುಖ್ಯಸ್ಥೆಯಾದ ಶ್ರೀಮತಿ ಯಶೋಧ ಆರ್. ಚವ್ಹಾಣ್ ಉಪಸ್ಥಿತರಿದ್ದರು. ಶ್ರೀ ಶಶಿಧರ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸಂತೋಷ್ ಪಾಟೀಲ ಧನ್ಯವಾದ ಸಮರ್ಪಿಸಿದರು .

## ಅಜೆಕಾರು ಪದ್ಮಗೋಪಾಲ ಎಜುಕೇಶನ್‌ಟ್ರಸ್ಟ್ (ರಿ.) ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಶಿಕ್ಷಣ ಸಂಸ್ಥೆಗಳ ಆವರಣ

# ಜ್ಞಾನರಂಜನೆ

## ಜ್ಞಾನ ಗೋಪಾಲ್ ಹಾಗೂ ಜ್ಞಾನ ಪದ್ಮ ವಿದ್ಯಾರ್ಥಿ ನಿಲಯೋತ್ಸವ



ಭವ್ಯ ಭವಿಷ್ಯದ ಕನಸು ಹೊತ್ತು ಬರುವ ವಿದ್ಯಾರ್ಥಿಗಳಿಗೆ ಸವಿ ನೆನಪಿನ ಬುತ್ತಿ ಕಟ್ಟಿ ಕೊಡುತ್ತಿರುವ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು, ಸಂಸ್ಥೆಯ ಅಧ್ಯಕ್ಷರಾದ ಡಾ. ಸುಧಾಕರ ಶೆಟ್ಟಿಯವರ ಘನ ಉಪಸ್ಥಿತಿಯಲ್ಲಿ ನಡೆಯಿತು. ಮುಖ್ಯ ಅತಿಥಿಯಾಗಿ ಸಂಸ್ಥೆಯ ಹಿತೈಷಿಗಳಾದ ಶ್ರೀಮತಿ ಲಕ್ಷ್ಮೀ. ಎನ್ ಭಟ್ ಅವರು ಮಾತನಾಡಿ ವಿದ್ಯಾರ್ಥಿಗಳು ಸಮಯದ ಸದುಪಯೋಗ ಪಡಿಸಿಕೊಳ್ಳಲು ಹೇಳಿದರು. ಡಾ.ಸುಧಾಕರ ಶೆಟ್ಟಿಯವರು ಮಾತನಾಡಿ, ವಿದ್ಯಾರ್ಥಿಗಳನ್ನು ಕಳಕಳಿಯಿಂದ ನೋಡಿಕೊಳ್ಳುತ್ತಿರುವ ನಿಲಯ ಪಾಲಕರುಗಳನ್ನು ಅಭಿನಂಧಿಸಿದರು. ಈ ಸಂದರ್ಭದಲ್ಲಿ ನಿಲಯಪಾಲಕಿ ಗೌರಿ ಅವರನ್ನು ವಿದ್ಯಾರ್ಥಿಗಳು ಸನ್ಮಾನಿಸಿದರು ನಿಲಯ ಪಾಲಕರುಗಳಾದ ಶ್ರೀ ಮಂಜುನಾಥ ಮುದ್ರಾಡಿ ಹಾಗೂ ಉಷಾ ರಾವ್ .ಯು ಉಪಸ್ಥಿತರಿದ್ದರು. ನಿಲಯ ಪಾಲಕರಾದ ಶ್ರೀ ಸಂದೀಪ ಸ್ವಾಗತಿಸಿದರು. ಶ್ರೀ ರವಿ. ಜಿ. ವಿದ್ಯಾರ್ಥಿಗಳ ಸಾಧನಾ ಪಟ್ಟಿ ವಾಚಿಸಿದರು. ಕು .ರಶ್ಮಿತ ಕಾರ್ಯಕ್ರಮ ನಿರ್ವಹಣೆ ಮಾಡಿದರು

# The Socio-Sensitive 'us' !

It is not very strange for a teenage student to frisson with an outburst of expressions when he is transparent to the happenings in the society. Perhaps his expressions gush, when he talks of the education system, student community, 'desh prem', politics and what not!

This article indeed tells you, on its own how I chose to pen down my thoughts about society and life being in a gunge of Physics, Chemistry and Math! I thought it was only me, but surprisingly there were many students who got furious and foggy reading 'Deccan Herald' and 'The Hindu', here in the hostel. Their thoughts perhaps, if channelized properly are indeed great ideas for development.

